# ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ ಸಂಖ್ಯೆ (08472) 256782
ಇ-ಮೇಲ್: dcahrd1969@gmail.com

ನಿಗಮ ಕಾರ್ಯಾಲಯ, ಸ್ಟೇಷನ್ ರಸ್ತೆ
ಜೆಸ್ಕಾಂ, ಕಲಬುರಗಿ-585102.

ಸಂಖ್ಯೆ: ಜೆಸ್ಕಾಂ/ಪ್ರ.ವ್ಯ/ಉಲೆನಿ(ಮಾ.ಸಂ.ಅ)/ಐ.ಟಿ.ಸಿ./ಅ-11/03/2024-25/ 25946-48 ದಿನಾಂಕ: 22 AUG 2024

## ಪ್ರಕಟಣೆ

ರಾಷ್ಟ್ರೀಯ ಶಿಶಿಕ್ಷು (ಅಪ್ರೆಂಟಿಸ್) ತರಬೇತಿ ಯೋಜನೆಯಡಿ (NCVT) ಪ್ರಮಾಣ ಪತ್ರ ಪಡೆದವರಿಗೆ ಒಂದು ವರ್ಷದ ಅವಧಿಯ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಹಾಗೂ (SCVT) ರಾಜ್ಯ ವೃತ್ತಿ ಪ್ರಮಾಣ ಪತ್ರ/ಅಂಕಪಟ್ಟಿ ಪಡೆದವರಿಗೆ 1 ವರ್ಷದ ಅವಧಿಯ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಅರ್ಹ ಶಿಶಿಕ್ಷು ಅಭ್ಯರ್ಥಿಗಳಿಂದ 2024-25ನೇ ಸಾಲಿನ ಆಯ್ಕೆಯ ಬಗ್ಗೆ ಪ್ರಕಟಣೆ.

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕೈಗಾರಿಕ ತರಬೇತಿ ಕೇಂದ್ರ, ಕಲಬುರಗಿ, ಇಲ್ಲಿ ನಡೆಸುವ 2024-25ನೇ ಸಾಲಿನ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ಶಿಶಿಕ್ಷು (ಅಪ್ರೆಂಟಿಸ್) ತರಬೇತಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

1. **ಅಭ್ಯರ್ಥಿ ವಯಸ್ಸು:** ದಿನಾಂಕ: 23.08.2024 ಕ್ಕೆ 16 ವರ್ಷ ಮೇಲ್ಪಟ್ಟು ಮತ್ತು ದಿನಾಂಕ: 13.09.2024 ಕ್ಕೆ 25, ವರ್ಷಕ್ಕಿಂತ ಸಾಮಾನ್ಯ ವರ್ಗ ಮತ್ತು ಇತರೆ ಹಿಂದುಳಿದ ವರ್ಗಗಳು ಮೀರಿರಬಾರದು, ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ವಯಸ್ಸು 13.09.2024 ಕ್ಕೆ 30 ವರ್ಷಕ್ಕಿಂತ ಮೀರಿರಬಾರದು.
2. **ಅಭ್ಯರ್ಥಿಯ ವಿದ್ಯಾರ್ಹತೆ:** ಎಸ್.ಎಸ್.ಎಲ್.ಸಿ. ನಂತರ ಎರಡು ವರ್ಷ ಅವಧಿಯ ಐ.ಟಿ.ಐ. ತರಬೇತಿ ಹೊಂದಿ, ಕುಶಲಕರ್ಮಿ ತರಬೇತಿ ಯೋಜನೆಯಡಿ ನಡೆಸುವ ವೃತ್ತಿ ಪರೀಕ್ಷೆಯ ಎಲೆಕ್ಟ್ರೀಷಿಯನ್ ವೃತ್ತಿಯಲ್ಲಿ ತೇರ್ಗಡೆಯಾಗಿ, ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರ (NCVT) ರಾಜ್ಯ ವೃತ್ತಿ ಪ್ರಮಾಣ ಪತ್ರ (SCVT) ಅಂಕಪಟ್ಟಿ ಹೊಂದಿರುವ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ.
3. **ಶಿಶಿಕ್ಷು ವೇತನ:**

   ರಾಷ್ಟ್ರೀಯ ವೃತ್ತಿ ಪ್ರಮಾಣ ಪತ್ರ ಪಡೆದ ಅಭ್ಯರ್ಥಿಗಳಿಗೆ (NCVT) ಹಾಗೂ ರಾಜ್ಯ ವೃತ್ತಿ ಪ್ರಮಾಣ ಪತ್ರ ಪಡೆದ ಅಭ್ಯರ್ಥಿಗಳಿಗೆ (SCVT) ಒಂದು ವರ್ಷದ ತರಬೇತಿ ಅವಧಿ: ಮಾಸಿಕ ರೂ. 5500/-
4. **ಇತರೆ ಅರ್ಹತಾ ಮಾನದಂಡಗಳು:**
   - ಅಭ್ಯರ್ಥಿಗಳು ಕನ್ನಡ ಓದಲು ಮತ್ತು ಬರೆಯಲು ತಿಳಿದಿರಬೇಕು.
   - ಕರ್ನಾಟಕ ರಾಜ್ಯದ ಅಭ್ಯರ್ಥಿಗಳಿಗೆ ಮೊದಲು ಆದ್ಯತೆ ನೀಡಲಾಗುವುದು.
   - ಆರೋಗ್ಯವಂತ ದೃಢಕಾಯ ಅಭ್ಯರ್ಥಿಗಳಿಗೆ ಮೊದಲು ಆದ್ಯತೆ ನೀಡಲಾಗುವುದು.
   - ಅಂಗವಿಕಲರು ಅರ್ಜಿಯನ್ನು ಸಲ್ಲಿಸಲು ಅರ್ಹರಿರುವುದಿಲ್ಲ.
   - ಒಂದು ಸಲ ವೃತ್ತಿ ತರಬೇತಿ ಪೂರ್ಣಗೊಳಿಸಿರುವ ಅಭ್ಯರ್ಥಿಗಳಿಗೆ ಪುನಃ ಅವಕಾಶವಿರುವುದಿಲ್ಲ.
   - ತರಬೇತಿಯ ಅವಧಿಯಲ್ಲಿ ಅಭ್ಯರ್ಥಿಗಳು ಕಲಬುರಗಿನಲ್ಲಿ ಊಟ/ವಸತಿ ಹಾಗೂ ಇತರ ವ್ಯವಸ್ಥೆಯನ್ನು ಸ್ವಂತ ಖರ್ಚಿನಲ್ಲಿ ಮಾಡಿಕೊಳ್ಳತಕ್ಕದ್ದು.
   - ತರಬೇತಿಯ ಅವಧಿಯಲ್ಲಿ ತರಬೇತಿ ಸಂಸ್ಥೆಯ ನಿಯಮ/ಶಿಸ್ತು ಪಾಲಿಸತಕ್ಕದ್ದು.
5. **ಅರ್ಜಿ ಸಲ್ಲಿಸುವ ವಿಧಾನ:**
   - ಪೂರ್ಣ ವಿವರವಿರುವ ಸ್ವಯಂ ಲಿಖಿತ ಅಥವಾ ಬೆರಳಚ್ಚು ಮಾಡಿದ ಅರ್ಜಿಗಳನ್ನು ಕೆಳಗೆ ಕಾಣಿಸಿರುವ ಅರ್ಜಿ ನಮೂನೆಯಂತೆ ಎಲ್ಲಾ ದಾಖಲೆಗಳೊಂದಿಗೆ "ಪ್ರಧಾನ ವ್ಯವಸ್ಥಾಪಕರು, (ಆ ಮತ್ತು ಮಾಸಂಅ), ನಿಗಮ ಕಛೇರಿ, ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ, (ಜೆಸ್ಕಾಂ) ಕಲಬುರಗಿ ರವರಿಗೆ ಸಲ್ಲಿಸತಕ್ಕದ್ದು.
   - ಅರ್ಜಿ ಕಳುಹಿಸುವ ಲಕೋಟೆಯ ಮೇಲೆ 2024-25ನೇ ಸಾಲಿನ ಶಿಶಿಕ್ಷು ಆಯ್ಕೆಗೆ ಅರ್ಜಿ ಎಂದು ಸ್ಪಷ್ಟವಾಗಿ ಬರೆದಿರಬೇಕು.

6. ಅರ್ಜಿಯೊಂದಿಗೆ ಲಗತ್ತಿಸುವ ದಾಖಲೆಗಳು.

- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಎಸ್.ಎಸ್.ಎಲ್. ಸಿ. ಅಂಕಪಟ್ಟಿ (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ವರ್ಗಾವಣೆ ಪ್ರಮಾಣ ಪತ್ರ (ಟಿ.ಸಿ) (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಕುಶಲಕರ್ಮಿ ಎಲೆಕ್ಟ್ರೀಷಿಯನ್ ವೃತ್ತಿ ಪರೀಕ್ಷೆಯ ಅಂಕಪಟ್ಟಿ (ಜೆರಾಕ್ಸ್ ಪ್ರತಿ)
- ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿದ ಜಾತಿ ಪ್ರಮಾಣ ಪತ್ರ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗಗಳು (ಜೆರಾಕ್ಸ್ ಪ್ರತಿ)
- ಇತ್ತೀಚಿನ ದೃಢೀಕರಿಸಲ್ಪಟ್ಟ ಜಿಲ್ಲಾ ಸರಕಾರಿ ಆಸ್ಪತ್ರೆಯ ಡಿಸ್ಟ್ರಿಕ್ಟ್ ಸರ್ಜನ್‌ರ ವೈದ್ಯಕೀಯ ಯೋಗ್ಯತಾ ಪ್ರಮಾಣ ಪತ್ರದ ಛಾಯಾ ಪ್ರತಿ (ಝರಾಕ್ಸ್)
- ಇಬ್ಬರು ಗಣ್ಯ ವ್ಯಕ್ತಿಗಳಿಂದ /ಗೆಜೆಟೆಡ್ ಅಧಿಕಾರಿಗಳಿಂದ ಇತ್ತೀಚಿನ ನಡತೆ ಪ್ರಮಾಣ ಪತ್ರವನ್ನು ಪಡೆದುಕೊಂಡು ದೃಢೀಕರಿಸಲ್ಪಟ್ಟ ಛಾಯಾ ಪ್ರತಿ (ಝರಾಕ್ಸ್) (ಶಾಲಾ ನಡತೆ ಹಾಗೂ ಬೊನಾಫಾಯ್ಡ್ ಪ್ರಮಾಣ ಪತ್ರ ಹೊರತುಪಡಿಸಿ)
- ಇತ್ತೀಚಿನ ಎರಡು ಭಾವಚಿತ್ರ (ಪಾಸ್ ಪೋರ್ಟ ಸೈಜಿನದು) ಇದರಲ್ಲಿ ಒಂದನ್ನು ಅರ್ಜಿಗೆ ಅಂಟಿಸುವದು.
- ಸ್ವ-ವಿಳಾಸವಿರುವ 4X9 ಇಂಚು ಅಳತೆಯ ಒಂದು ಲಕೋಟೆ ಮೇಲೆ ರೂ. 25/- ಮೌಲ್ಯದ ಅಂಚೆ ಚೀಟಿಯನ್ನು ಹಚ್ಚಿರಬೇಕು.
- ಅಭ್ಯರ್ಥಿಗಳು ತರಬೇತಿ ಹೊಂದಿದ ಐ.ಟಿ.ಐ/ಐ.ಟಿ.ಸಿ. ಸಂಸ್ಥೆಯ, ಎನ್.ಸಿ.ವಿ.ಟಿ ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಪತ್ರದ (ಜೆರಾಕ್ಸ್ ಪ್ರತಿಯನ್ನು) ತರಬೇತಿ ಸಂಸ್ಥೆಯಿಂದ ಪಡೆದು ಸಲ್ಲಿಸುವುದು.
- 371 (ಜೆ) ಕಾಯ್ದೆ ಅಡಿಯಲ್ಲಿ ಬರುವ ಅಭ್ಯರ್ಥಿಗಳು ಸಂಬಂಧ ಪಟ್ಟ ಅಧಿಕಾರಿಗಳಿಂದ ನೀಡಿದ ಪ್ರಮಾಣ ಪತ್ರದ ಪ್ರತಿಯನ್ನು ತಪ್ಪದೆ ಲಗತ್ತಿಸುವದು. ಇದಕ್ಕೆ ತಪ್ಪಿದಲ್ಲಿ ಇಂಥ ಅರ್ಜಿಗಳನ್ನು ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ ಬರುವದಿಲ್ಲವೆಂದು ಪರಿಗಣಿಸಲಾಗುವದು.

- **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:-** ಭರ್ತಿ ಮಾಡಿದ ಅರ್ಜಿಗಳನ್ನು ಎಲ್ಲಾ ಲಗತ್ತಿನೊಡನೆ ದಿನಾಂಕ: **23.08.2024 ರಿಂದ 13.09.2024** ರವರೆಗೆ ಸಾಯಂಕಾಲ 5.00 ಗಂಟೆಯೊಳಗೆ ನೇರವಾಗಿ ಅಥವಾ ಅಂಚೆಯ ಮೂಲಕ ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ ಗು.ವಿ.ಸ.ಕಂ.ನಿ., ಸ್ಟೇಷನ್ ರೋಡ್ ಕಲಬುರಗಿ, 585102 ಇವರಿಗೆ ತಲುಪುವಂತೆ ಕಳುಹಿಸತಕ್ಕದ್ದು.
- ದಿನಾಂಕ: 13.09.2024 ರ ಸಾಯಂಕಾಲ 5:00 ಗಂಟೆ ನಂತರ ಬರುವ/ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವದಿಲ್ಲ.
- ಪೂರ್ಣ ವಿವರ ಮತ್ತು ದಾಖಲೆಗಳಿಲ್ಲದ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಶಿಫಾರಸ್ಸು ತರುವ ಅಭ್ಯರ್ಥಿಗಳ ಅರ್ಜಿಯನ್ನು ತಿರಸ್ಕರಿಸಲಾಗುವುದು.
- ಯಾವುದೇ ರೀತಿಯ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.
- ಒಟ್ಟು ಆಯ್ಕೆ :ಐಟಿಐ/ಐಟಿಸಿ (ಎಲೆಕ್ಟ್ರೀಷಿಯನ್ ವೃತ್ತಿ) ಯಲ್ಲಿ ಗರಿಷ್ಠ ಅಂಕಗಳ ಆಧಾರದ ಮೇಲೆ ಮೀಸಲಾತಿ ರೋಸ್ಟರ ಪ್ರಕಾರ 221 ಶಿಶಿಕ್ಷುಗಳನ್ನು ಆಯ್ಕೆ ಮಾಡಿಕೊಳ್ಳಲಾಗುವದು.
- (ಅ) ಕಲ್ಯಾಣ ಕರ್ನಾಟಕ ಪ್ರದೇಶ ನಿಯಂತ್ರಣ ಆದೇಶ ಕಾಯ್ದೆ ಕ್ರ.ಸಂ. 371 (ಜೆ) ಅಡಿಯಲ್ಲಿ ಬರುವ ಅಭ್ಯರ್ಥಿಗಳನ್ನು ಶಿಶಿಕ್ಷು ತರಬೇತಿಗೆ ಆಯ್ಕೆ ಪಟ್ಟಿ.

| ಸಮತಳ ಮೀಸಲಾತಿ | ಸಾ.ಅ 44% | ಪಜಾ 17% | ಪಪಂ 7% | ಸಿ.1 4% | ಸಿ.2ಎ 15% | ಸಿ.2ಬಿ 4% | ಸಿ.3ಎ 4% | ಸಿ.3ಬಿ 5% | ಒಟ್ಟು |
|---|---|---|---|---|---|---|---|---|---|
| ಸಾಮಾನ್ಯ ಅಭ್ಯರ್ಥಿ 32% | 24 | 08 | 03 | 03 | 09 | 03 | 03 | 04 | 57 |
| ಮಹಿಳಾ ಅಭ್ಯರ್ಥಿ 33% | 26 | 10 | 04 | 02 | 09 | 02 | 02 | 03 | 58 |
| ಕನ್ನಡ ಮಾಧ್ಯಮ ಅಭ್ಯರ್ಥಿ 5% | 04 | 02 | 01 | - | 01 | - | - | - | 08 |
| ಯೋಜನೆ ನಿರಾಶ್ರಿತಗೊಂಡ ಅಭ್ಯರ್ಥಿ 5% | 04 | 02 | 01 | - | 01 | - | - | - | 08 |
| ಗ್ರಾಮೀಣ ಪ್ರದೇಶದ ಅಭ್ಯರ್ಥಿ 25% | 20 | 08 | 03 | 02 | 07 | 02 | 02 | 02 | 46 |
| ಒಟ್ಟು | 78 | 30 | 12 | 07 | 27 | 07 | 07 | 09 | 177 |

- (ಆ) ಕಲ್ಯಾಣ ಕರ್ನಾಟಕ ಪ್ರದೇಶ ವ್ಯಾಪ್ತಿಯಲ್ಲಿನ ಅಭ್ಯರ್ಥಿಗಳನ್ನು ಹೊರತು ಪಡಿಸಿ ಬೇರೆ ಪ್ರದೇಶದ ಅಭ್ಯರ್ಥಿಗಳ ಆಯ್ಕೆ ಪಟ್ಟಿ.

| ಸಮತಳ ಮೀಸಲಾತಿ | ಸಾ.ಅ 44% | ಪಜಾ 17% | ಪಪಂ 7% | ಸಿ.1 4% | ಸಿ.2ಎ 15% | ಸಿ.2ಬಿ 4% | ಸಿ.3ಎ 4% | ಸಿ.3ಬಿ 5% | ಒಟ್ಟು |
|---|---|---|---|---|---|---|---|---|---|
| ಪುರುಷ ಅಭ್ಯರ್ಥಿ 32% | 07 | 03 | 01 | 01 | 03 | 01 | 01 | 01 | 18 |
| ಮಹಿಳಾ ಅಭ್ಯರ್ಥಿ 33% | 05 | 02 | 01 | 01 | 02 | 01 | 01 | 01 | 14 |
| ಕನ್ನಡ ಮಾಧ್ಯಮ ಅಭ್ಯರ್ಥಿ 5% | 01 | - | - | - | - | - | - | - | 01 |
| ಯೋಜನೆ ನಿರಾಶ್ರಿತಗೊಂಡ ಅಭ್ಯರ್ಥಿ 5% | 01 | - | - | - | - | - | - | - | 01 |
| ಗ್ರಾಮೀಣ ಪ್ರದೇಶದ ಅಭ್ಯರ್ಥಿ 25% | 05 | 02 | 01 | - | 02 | - | - | - | 10 |
| ಒಟ್ಟು | 19 | 07 | 03 | 02 | 07 | 02 | 02 | 02 | 44 |

- ಶಿಶಿಕ್ಷುಗಳಿಗೆ ತರಬೇತಿ ಪೂರ್ಣಗೊಂಡ ನಂತರ ಉದ್ಯೋಗ ನೀಡಬೇಕೆಂದು ಗುವಿಸಕಂಪನಿಗೆ ಯಾವುದೇ ಬಾಧ್ಯತೆ ಇರುವುದಿಲ್ಲ. ಹಾಗೂ ಉದ್ಯೋಗ ಖಾತರಿಗಾಗಿ ಹಕ್ಕೋತ್ತಾಯ ಮಾಡಲು ಬರುವುದಿಲ್ಲ.

22/08/2024

ಪ್ರಧಾನ ವ್ಯವಸ್ಥಾಪಕರು
(ಆ ಮತ್ತು ಮಾ.ಸಂ.ಅ)
ಗುವಿಸಕಂನಿ, ಕಲಬುರಗಿ.

**ಪ್ರತಿಗಳು :**

1. ಉಪ ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಕಲಬುರಗಿ ರವರಿಗೆ ಎರಡು ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಕಟಣೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ (ವಿ), ಐ.ಟಿ ಶಾಖೆ, ನಿಗಮ ಕಛೇರಿ, ಗುವಿಸಕಂನಿ, ಕಲಬುರಗಿರವರಿಗೆ ಅಂತರ ಜಾಲದಲ್ಲಿ (website) gescom.karnataka.gov.in ಪ್ರಕಟಣೆಗಾಗಿ.